ಇ) ಬೆಂಗಳೂರು ಮಹಾನಗರ ಕಾರ್ಯಚರಣೆ ಪಡೆ ಪೊಲೀಸ್ ಠಾಣೆಗೆ ಸಂಬಂಧಿಸಿದಂತಹ ಒಟ್ಟು 61 ಕಡತಗಳು ಅಂದರೆ ಅರ್ಜಿಗಳ ವಿಚಾರಣೆ ಮುಗಿಸಿರುವ ಕಡತಗಳು, ತನಿಖೆ ಹಾಗೂ ನ್ಯಾಯಾಲಯ ವಿಚಾರಣೆಯಲ್ಲಿರುವ ಕಡತಗಳು, ಪ್ರಕರಣಗಳಲ್ಲಿ ಅಮಾನತ್ತು ಪಡಿಸಿರುವ ದಾಖಲಾತಿಗಳು ಹಾಗೂ ಇತರೆ ಕಡತಗಳು ಬೆಂಕಿ ಅವಘಡದಲ್ಲಿ ನಾಶವಾಗಿವೆ.

ಈ) ಬೆಂಕಿ ಆಕಸ್ಮಿಕಕ್ಕೆ ಸಂಬಂಧಿಸಿದಂತೆ ಅಲಸೂರು ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 293/11 ರಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ.

ಎಸ್.ಡಿ.ಎ. ಮತ್ತು ಎಫ್.ಡಿ.ಎ ಪರೀಕ್ಷೆ

572 (408) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ ಲೇಜೌಟ್):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಲೋಕಸೇವಾ ಆಯೋಗವು ಜೂನ್ 2010ರಲ್ಲಿ ಎಸ್.ಡಿ.ಎ ಮತ್ತು ಎಫ್.ಡಿ.ಎ. ಪರೀಕ್ಷೆಗಳನ್ನು ನಡೆಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಹುದ್ದೆಗಳ ಭರ್ತಿಗಾಗಿ ಈ ಪರೀಕ್ಷೆಗಳನ್ನು ನಡೆಸಲಾಯಿತು;

ಇ) ಈ ಪರೀಕ್ಷೆಗಳಿಗೆ ಹಾಜರಾದ ಅಭ್ಯರ್ಥಿಗಳ ಸಂಖ್ಯೆ ಎಷ್ಟು;

ಈ) ಈ ಪರೀಕ್ಷೆಗಳಿಂದ ಪಡೆದ ಒಟ್ಟು ಶುಲ್ಕದ ಹಣವೆಷ್ಟು;

ಉ) ಈ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಲಾಗಿದೆಯೇ;

ಊ) ಇಲ್ಲದಿದ್ದಲ್ಲಿ, ಯಾವಾಗ ಪ್ರಕಟಿಸಲಾಗುವುದು ಹಾಗೂ ಯಾವಾಗ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು):–

ಅ) ಕರ್ನಾಟಕ ಲೋಕಸೇವಾ ಆಯೋಗವು ಪ್ರಥಮ ದರ್ಜೆ ಸಹಾಯಕ ಮತ್ತು ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಜೂನ್ 2011ರಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿರುತ್ತದೆ.

ಆ) ಪ್ರಥಮ ದರ್ಜೆ ಸಹಾಯಕರ 1,195 ಮತ್ತು ದ್ವಿತೀಯ ದರ್ಜೆ ಸಹಾಯಕ 1,551 ಹುದ್ದೆಗಳಿಗೆ ಪರೀಕ್ಷೆಗಳನ್ನು ನಡೆಸಲಾಯಿತು.

ಇ) ಪ್ರಥಮ ದರ್ಜೆ ಸಹಾಯಕ ಹುದ್ದೆಗಳಿಗೆ 2,18,505 ಮತ್ತು ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಿಗೆ 4,07,821 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಈ) ರೂ. 13,08,95,090/-

ಉ) ಪ್ರಥಮ ದರ್ಜೆ ಸಹಾಯಕ ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ: 28-09-2011ರಂದು ಮತ್ತು ದ್ವಿತೀಯ ದರ್ಜೆ ಸಹಾಯಕ ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ: 08-11-2011ರಂದು ಪ್ರಕಟಿಸಲಾಗಿರುತ್ತದೆ.

ಊ) ಪ್ರಥಮ ದರ್ಜೆ ಸಹಾಯಕ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ: 30-11-2011ರಂದು ಪ್ರಕಟಿಸಲಾಗಿದೆ. ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಡಿಸೆಂಬರ್ ಅಂತ್ಯದಲ್ಲಿ ಪ್ರಕಟಿಸಲಾಗುವುದು.

ರೈತರ ಹೆಸರುಗಳನ್ನು ಪಹಣಿಗಳಲ್ಲಿ ನಮೂದಿಸುವುದು

573 (144) ಶ್ರೀ ರಾಮಸ್ವಾಮಿಗೌಡ ಬಿ.ಬಿ. (ಕುಣಿಗಲ್):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆಯಲ್ಲಿನ ಬಹುತೇಕ ತಾಲ್ಲೂಕುಗಳಲ್ಲಿ ದರಖಾಸ್ತು ಮೂಲಕ ಮಂಜೂರಾತಿ ಪಡೆದಿದ್ದ ರೈತರ ಜಮೀನುಗಳಿಗೆ 1998ರಿಂದ ಆರ್.ಟಿ.ಸಿ. ಬರೆಯುವುದನ್ನು ಕೈಬಿಟ್ಟು, ಸದರಿ ಪಹಣಿಗಳಲ್ಲಿ **" ಸರ್ಕಾರಿ ಜಮೀನು"** ಎಂದು ಬರೆದು ಮುಂದುವರೆಸುತ್ತಿರುವುದು ಮತ್ತು ಸಾಗುವಳಿ ಚೀಟಿ ನೀಡಿ, ಕಂದಾಯ ದಾಖಲೆಗಳು ಶಿಥಿಲಗೊಂಡಿವೆ ಇತ್ಯಾದಿಯಾಗಿ ರೈತರ ಅರ್ಜಿಗಳಿಗೆ ಹಿಂಬರಹಗಳನ್ನು ಅಧಿಕಾರಿಗಳು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರೈತರ ಹೆಸರುಗಳನ್ನು ಪಹಣಿಗಳಲ್ಲಿ ನಮೂದಿಸಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು):-

ಅ) ತಹಸೀಲ್ದಾರ್, ಕುಣಿಗಲ್‌ರವರ ವರದಿಯಂತೆ ಕುಣಿಗಲ್ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನಿನ ಪಹಣಿಗಳಲ್ಲಿ ಅಕ್ರಮವಾಗಿ ಪೈಕಿ ನಂಬರ್ ನೀಡಿ ನಮೂದಾಗಿದ್ದ